ಪಿ.ಡಬ್ಲ್ಯು:2

**ದಿನಾಂಕಃ17.11.2021 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ.ಸಿ.ವಿ.ಎಸ್. ವಕೀಲರಿಂದಃ**

1ನೇ ಪ್ರತಿವಾದಿ ಕೃಷ್ಣಮೂರ್ತಿ ಅವರಿಗೆ ವಾದಿ ನಾಗಮ್ಮ ಕ್ರಯಪತ್ರ ಮಾಡಿಕೊಟ್ಟ ಮೇರೆಗೆ ಪಹಣಿ ಬಂದಿರುತ್ತದೆ. ನಿಪಿ-3 ಮತ್ತು 4ರಂತೆ ಪಹಣಿ ಮತ್ತು ಎಂ.ಆರ್.ಬಂದಿರುತ್ತವೆ ಅಂದರೆ ಸರಿ. ನಿಪಿ-5 ರಿಂದ ನಿಪಿ-9 ಕ್ರಯಪತ್ರಗಳು ದಾವಾಆಸ್ತಿಗೆ ಸಂಬಂಧಿಸಿದ ಕ್ರಯಪತ್ರಗಳಲ್ಲ ಅಂದರೆ, ಸಾಕ್ಷಿಯು ನಿಪಿ-7 ರಿಂದ 9ರ ಕ್ರಯಪತ್ರಗಳಲ್ಲಿನ ಆಸ್ತಿಗಳನ್ನು ಮಾರಿ ದಾವಾ ಆಸ್ತಿಯನ್ನು ಖರೀದಿಸಲಾಗಿದೆ ಎಂದು ನುಡಿಯುತ್ತಾರೆ. ನಿಪಿ-7 ರಿಂದ 9ರ ಕ್ರಯಪತ್ರಗಳು ವಾದಿ ನಾಗಮ್ಮ ಮತ್ತು ಅವರ ಮಕ್ಕಳು ಆಸ್ತಿ ಖರೀದಿಸಿರುವ ಕ್ರಯಪತ್ರಗಳು ಅಂದರೆ ಸರಿ. ನಿಪಿ-1 ಕ್ರಯಪತ್ರವಾದ ನಂತರ 2016ನೇ ಸಾಲಿನವರೆಗೆ ವಾದಿ ಅಥವಾ ಅವರ ಕುಟುಂಬದವರು ನಿಪಿ-1ರ ಕ್ರಯಪತ್ರವನ್ನು ಯಾವತ್ತೂ ಪ್ರಶ್ನೆ ಮಾಡಿಲ್ಲ? ಅಂದರೆ, ಸಾಕ್ಷಿಯು ಬಡ್ಡಿಗಾಗಿ ನಿಪಿ-1ರ ಕ್ರಯಪತ್ರ ಮಾಡಿಕೊಟ್ಟಿದ್ದರಿಂದ ಅದನ್ನು ಪ್ರಶ್ನೆ ಮಾಡಿಲ್ಲ ಎಂದು ನುಡಿಯುತ್ತಾರೆ. ನಿಪಿ-2 ಕ್ರಯಪತ್ರದಂತೆ ದಾವಾ ಆಸ್ತಿಯನ್ನು 1ನೇ ಪ್ರತಿವಾದಿಯು 2ನೇ ಪ್ರತಿವಾದಿಗೆ ಮಾರಾಟ ಮಾಡಿದ್ದಾರೆ ಅಂದರೆ, ಸಾಕ್ಷಿಯು ಅದು ನಮಗೆ ಗೊತ್ತಾದ ನಂತರವೇ ಈ ದಾವೆ ದಾಖಲು ಮಾಡಿದ್ದೇವೆ ಎಂದು ನುಡಿಯುತ್ತಾರೆ.

ನಿಪಿ-1 ಮತ್ತು 2ಕ್ರಯಪತ್ರದ ದೃಢೀಕೃತ ನಕಲುಗಳನ್ನು ನೀವೇ ಉಪನೊಂದಣಾಧಿಕಾರಿಗಳ ಕಛೇರಿಯಲ್ಲಿ ಅರ್ಜಿ ಸಲ್ಲಿಸಿ ಪಡೆದುಕೊಂಡಿದ್ದೀರಾ? ಅಂದರೆ, ಸಾಕ್ಷಿಯು ವಾದಿ ನಾಗಮ್ಮನವರಿಗೆ ಹುಷಾರಿಲ್ಲದ ಕಾರಣ ನಾನೇ ಪಡೆದುಕೊಂಡಿದ್ದೀನಿ ಎಂದು ನುಡಿಯುತ್ತಾರೆ. ದಾವಾ ಆಸ್ತಿ ಖಾತೆ ಈಗ 2ನೇ ಪ್ರತಿವಾದಿ ಮೋಹನರವರ ಹೆಸರಿನಲ್ಲಿದೆ ಅಂದರೆ ಸರಿ. ದಾವಾ ಆಸ್ತಿಯನ್ನು ನಿಪಿ-1 ಕ್ರಯಪತ್ರದ ಮುಖಾಂತರ 1ನೇ ಪ್ರತಿವಾದಿಗೆ ಕ್ರಮಬದ್ಧವಾಗಿ ಮಾರಾಟ ಮಾಡಿದ್ದರೂ ಸಹ ನಾನೇ ವಾದಿಗೆ ಕುಮ್ಮಕ್ಕು ನೀಡಿ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಈ ದಾವೆ ದಾಖಲು ಮಾಡಿಸಿದ್ದೇನೆ ಅಂದರೆ ಸರಿಯಲ್ಲ. ದಾವಾ ಆಸ್ತಿ

ವಾದಿ ನಾಗಮ್ಮ ಅವರ ಸ್ವಯಾರ್ಜಿತ ಆಸ್ತಿಯಾಗಿದ್ದು, ನಮಗೂ ದಾವಾ ಆಸ್ತಿಗು ಸಂಬಂಧ ಇಲ್ಲ ಅಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ಕ್ರಯಪತ್ರಗಳು ನಮಗೂ ಬಂಧನಕಾರಿಯಾಗಿರುತ್ತವೆ ಅಂದರೆ ಸರಿಯಲ್ಲ. ನಾನು ಹೇಳುವಂತೆ 1 ನೇ ಪ್ರತಿವಾದಿಗೆ ಬಡ್ಡಿ ಹಣಕ್ಕಾಗಿ ನಿಪಿ-1 ರ ಕ್ರಯಪತ್ರವನ್ನು ಬರೆದುಕೊಟ್ಟಿಲ್ಲ ಅಂದರೆ ಸರಿಯಲ್ಲ. ದಾವಾ ಆಸ್ತಿಗು ನಮಗೂ ಯಾವುದೇ ಸಂಬಂಧ ಇಲ್ಲದಿದ್ದರೂ ಸಹ ಅಕ್ರಮ ಲಾಭ ಪಡೆಯುವ ಉದ್ದೇಶದಿಂದ ಸುಳ್ಳು ದಾವೆ ಸಲ್ಲಿಸಿದ್ದೇನೆ ಅಂದರೆ ಸರಿಯಲ್ಲ.

**<u>ಮರು ವಿಚಾರಣೆಃ ಇರುವುದಿಲ್ಲ.</u>**

(ನನ್ನ ಉಕ್ತಲೇಖನಕ್ಕೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)

ಓ.ಹೇ.ಕೇ.ಸ.ಇ.ಎ.ಒ.

ಸಹಿ/-

(ದೀಪು ಎಂ.ಟಿ.)
3 ನೇ.ಹೆ.ಪ್ರಃದಃನ್ಯಾಃದಂ.,ರವರು, ಕಡೂರು.